# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **986** |
| ಸದಸ್ಯರ ಹೆಸರು | : | ಶ್ರೀ ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | **27/12/2022** |
| ಉತ್ತರಿಸುವ ಸಚಿವರು | : | ಮಾನ್ಯ ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು |

| | *ಪ್ರಶ್ನೆ* | *ಉತ್ತರ* |
|---|---|---|
| ಅ | ರಾಜ್ಯದಲ್ಲಿ ಇರುವ ವಿವಿಧ ಪೌರಾಡಳಿತ ಸ್ಥಳೀಯ ಸಂಸ್ಥೆಗಳೆಷ್ಟು; ಪೌರಾಡಳಿತ ಸ್ಥಳೀಯ ಸಿಬ್ಬಂದಿ ಮಾದರಿ ಯಾವುದು; ಆಯಾಯ ಪೌರಾಡಳಿತ ಸ್ಥಳೀಯ ಸಂಸ್ಥೆಯ ಸಿಬ್ಬಂದಿ ಮಾದರಿಯಂತೆ ಸಿಬ್ಬಂದಿ ಇದ್ದಾರೆಯೇ; ಇಲ್ಲದಿದ್ದರೆ, ಎಷ್ಟು ಸಿಬ್ಬಂದಿಯ ಕೊರತೆಯಿದೆ; ಈ ಕೊರತೆಯನ್ನು ಹೇಗೆ ಸರಿದೂಗಿಸಲಾಗುತ್ತಿದೆ (ಪೌರಾಡಳಿತ ಸ್ಥಳೀಯ ಸಂಸ್ಥೆವಾರು ವಿವರ ನೀಡುವುದು); | ರಾಜ್ಯದಲ್ಲಿರುವ ನಗರಸಭೆಗಳು:61.<br>ಪುರಸಭೆಗಳು:126.<br>ಪಟ್ಟಣ ಪಂಚಾಯಿತಿಗಳು:114.<br>ಅಧಿಸೂಚಿತ ಪ್ರದೇಶಗಳು:04.<br><br>ನಗರ ಸ್ಥಳೀಯ ಸಂಸ್ಥೆಗಳಿಗೆ ಪೌರಸಭೆಗಳ ವೃಂದ ಮತ್ತು ನೇಮಕಾತಿ ನಿಯಮಗಳು-2010 ಹಾಗೂ ಕರ್ನಾಟಕ ಪೌರಾಡಳಿತ ಸೇವಾ ಅಧಿಕಾರಿಗಳ ವೃಂದ ಮತ್ತು ನೇಮಕಾತಿ ನಿಯಮಗಳು-2022 ರಲ್ಲಿನ ಸಿಬ್ಬಂದಿ ಮಾದರಿ ಇರುತ್ತದೆ.<br><br>ಸಿಬ್ಬಂದಿ ಮಾದರಿಯನ್ವಯ, ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮಂಜೂರಾದ ಒಟ್ಟು 35,108 ಹುದ್ದೆಗಳಲ್ಲಿ 12,179 ಖಾಯಂ ನೌಕರರು ಕರ್ತವ್ಯ ನಿರ್ವಹಿಸುತ್ತಿದ್ದು, 22,929 ಹುದ್ದೆಗಳು ಖಾಲಿ ಇರುತ್ತದೆ.<br><br>ದಿನಗೂಲಿ / ಗುತ್ತಿಗೆ / ಹೊರಗುತ್ತಿಗೆ / ನೇರಪಾವತಿಯಡಿ ಒಟ್ಟು 15,914 ಹುದ್ದೆಗಳಲ್ಲಿ ನೌಕರರು ಕರ್ತವ್ಯ ನಿರ್ವಹಿಸುತ್ತಿದ್ದು, ಹಾಲಿ ಇರುವ ಖಾಯಂ ಹಾಗೂ ದಿನಗೂಲಿ / ಮತ್ತಿತರ ಸಿಬ್ಬಂದಿಯಿಂದ ಸಾರ್ವಜನಿಕರಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ಪೌರಾಡಳಿತ ಸ್ಥಳೀಯ ಸಂಸ್ಥೆವಾರು ವೃಂದಬಲದ ವಿವರವನ್ನು **ಅನುಬಂಧ-1** ರಲ್ಲಿ ಒದಗಿಸಿದೆ. |
| ಆ | ಪೌರಾಡಳಿತ ಸ್ಥಳೀಯ ಸಂಸ್ಥೆಗಳಿಗೆ ಅಗತ್ಯವಿರುವ ಮೂಲಭೂತ ಸೌಕರ್ಯಗಳು ಯಾವುವು; ಎಲ್ಲಾ ಸದರಿ ಸಂಸ್ಥೆಗಳಿಗೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆಯೇ; ಇಲ್ಲದಿದ್ದಲ್ಲಿ, ಅಗತ್ಯ ಮೂಲಭೂತ ಸೌಕರ್ಯ ಒದಗಿಸಲು ಯಾವ ಕ್ರಮಗಳನ್ನು ಜರುಗಿಸಲಾಗುವುದು (ವಿವರ ನೀಡುವುದು); | ಪೌರಾಡಳಿತ ಸ್ಥಳೀಯ ಸಂಸ್ಥೆಗಳಿಗೆ ಕುಡಿಯುವ ನೀರು, ರಸ್ತೆ, ಪಾದಚಾರಿ ಮಾರ್ಗಗಳು, ಮಳೆ ನೀರು ನಿರ್ವಹಣೆ, ಬೀದಿದೀಪ, ಒಳಚರಂಡಿ ಮತ್ತು ಸೇಪ್ಟೇಜ್ ವ್ಯವಸ್ಥೆ, ಉದ್ಯಾನವನ, ಸ್ಮಶಾನ/ಚಿತಾಗಾರ, ಸಾಮಾನ್ಯ ಮತ್ತು ಸಾಮೂಹಿಕ ಶೌಚಾಲಯ, ಘನತ್ಯಾಜ್ಯ ವಸ್ತು ವಿಲೇವಾರಿ, ಮುಂತಾದ ಮೂಲಭೂತ ಸೌಕರ್ಯಗಳನ್ನು ವಿವಿಧ ಯೋಜನೆಗಳಡಿ ಕಲ್ಪಿಸಲಾಗುತ್ತಿದೆ.<br><br>ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಿಗೆ ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಈ ಕೆಳಕಂಡ ಯೋಜನೆಗಳಡಿ ಕಾಮಗಾರಿಗಳನ್ನು ನಿರ್ವಹಿಸಲಾಗುತ್ತಿದೆ. ಯೋಜನಾವಾರು ವಿವರ ಈ ಕೆಳಗಿನಂತಿದೆ:<br><br>**1. ನಗರೋತ್ಥಾನ (ಮುನಿಸಿಪಾಲಿಟಿ)-4 ನೇ ಹಂತದ ಯೋಜನೆ:**<br>ನಗರೋತ್ಥಾನ (ಮುನಿಸಿಪಾಲಿಟಿ)-4 ನೇ ಹಂತದ ಯೋಜನೆಯಡಿ ರಸ್ತೆ, ಚರಂಡಿ ಅಭಿವೃದ್ಧಿ, ಮಳೆ ನೀರು |

ಚರಂಡಿ, ಕುಡಿಯುವ ನೀರಿನ ಸೌಲಭ್ಯ, ಒಳಚರಂಡಿ ವ್ಯವಸ್ಥೆ, ಶೌಚಾಲಯ ನಿರ್ಮಾಣ, ಕಛೇರಿ ಕಟ್ಟಡ, ಬಸ್ ನಿಲ್ದಾಣ, ಬೀದಿ ದೀಪಗಳು, ಮಾರುಕಟ್ಟೆ ಸಂಕೀರ್ಣ, ಉದ್ಯಾನವನ ಮತ್ತು ಆಟದ ಮೈದಾನ ಸೌಕರ್ಯಗಳನ್ನು ಕಲ್ಪಿಸಲಾಗುತ್ತಿದೆ. ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ಸರ್ಕಾರವು ನಗರೋತ್ಥಾನ ಯೋಜನೆಗಳನ್ನು ಜಾರಿಗೆ ತಂದಿರುತ್ತದೆ.

ಪ್ರಸ್ತುತ ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಯೋಜನೆ (ಹಂತ-4) ಯನ್ನು 2022-23 ರಿಂದ 2024-25 ನೇ ಸಾಲಿನವರೆಗೆ ರಾಜ್ಯದ 302 ನಗರ ಸ್ಥಳೀಯ ಸಂಸ್ಥೆಗಳಿಗೆ ಒಟ್ಟು ರೂ.3,885.00 ಕೋಟಿಗಳಲ್ಲಿ ಅನುಷ್ಠಾನಗೊಳಿಸಲು ಸರ್ಕಾರದ ಆದೇಶ ಸಂಖ್ಯೆ:ನಅಇ 124 ಸಮಸ 2021; ದಿನಾಂಕ:14/01/2022 ರಲ್ಲಿ ಅನುಮೋದನೆಯಾಗಿರುತ್ತದೆ. ಈ ಯೋಜನೆಯಡಿ-

- ಜಿಲ್ಲಾ ಕೇಂದ್ರದಡಿ ನಗರ ಸಭೆಗಳು ಮತ್ತು ಗ್ರೇಡ್-1 ನಗರಸಭೆಗಳಿಗೆ ತಲಾ ರೂ.40.00 ಕೋಟಿ;
- ಇನ್ನುಳಿದ ಎಲ್ಲಾ ನಗರಸಭೆಗಳಿಗೆ ತಲಾ ರೂ.30.00 ಕೋಟಿ;
- ಪುರಸಭೆಗಳಿಗೆ ತಲಾ ರೂ.10.00 ಕೋಟಿ ಹಾಗೂ
- ಪಟ್ಟಣ ಪಂಚಾಯಿತಿಗಳಿಗೆ ರೂ.5.00 ಕೋಟಿ ಗಳಂತೆ ಹಂಚಿಕೆ ಮಾಡಲಾಗಿರುತ್ತದೆ.

**2. <u>ಎಸ್.ಎಫ್.ಸಿ ವಿಶೇಷ ಅನುದಾನದ ಯೋಜನೆ:</u>**

- ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಿಗೆ ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಎಸ್.ಎಫ್.ಸಿ ಮುಕ್ತನಿಧಿ, ಎಸ್.ಎಫ್.ಸಿ ಕುಡಿಯುವ ನೀರಿನ ಯೋಜನೆ ಮತ್ತು ಎಸ್.ಎಫ್.ಸಿ ವಿಶೇಷ ಅನುದಾನದ ಯೋಜನೆಗಳಡಿ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದೆ.
- **ಎಸ್.ಎಫ್.ಸಿ ಮುಕ್ತನಿಧಿ ಯೋಜನೆಯಡಿ** ಕಳೆದ ಮೂರು ವರ್ಷಗಳಲ್ಲಿ ಸರ್ಕಾರದಿಂದ ಒಟ್ಟು ರೂ.28,419 ಲಕ್ಷ ಅನುದಾನ ಕಾಯ್ದಿರಿಸಿದ್ದು, ಅದರಲ್ಲಿ ಒಟ್ಟು ರೂ.27,871 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ.
- **ಎಸ್.ಎಫ್.ಸಿ ಕುಡಿಯುವ ನೀರಿನ ಯೋಜನೆಯಡಿ** ಕಳೆದ ಮೂರು ವರ್ಷಗಳಲ್ಲಿ ಸರ್ಕಾರದಿಂದ ಒಟ್ಟು ರೂ.9,094 ಲಕ್ಷ ಅನುದಾನ ಕಾಯ್ದಿರಿಸಿದ್ದು, ಸದರಿ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.
- **ಎಸ್.ಎಫ್.ಸಿ ವಿಶೇಷ ಅನುದಾನದ ಯೋಜನೆಯಡಿ** ಕಳೆದ ಮೂರು ವರ್ಷಗಳಲ್ಲಿ ಸರ್ಕಾರದಿಂದ ಒಟ್ಟು ರೂ.85,576 ಲಕ್ಷ ಅನುದಾನ ಕಾಯ್ದಿರಿಸಿದ್ದು, ಅದರಲ್ಲಿ ರೂ.45,336 ಲಕ್ಷ ಅನುದಾನ ಬಿಡುಗಡೆ ಮಾಡಲಾಗಿದೆ.

**3. <u>15 ನೇ ಹಣಕಾಸು ಆಯೋಗದ ಅನುದಾನ:</u>**

2022-23 ನೇ ಸಾಲಿಗೆ ರಾಜ್ಯದ ನಗರ ಸ್ಥಳೀಯ

| | | |
|---|---|---|
| | | ಸಂಸ್ಥೆಗಳಿಗೆ ಒಟ್ಟು ರೂ.777.00 ಕೋಟಿ ಅನುದಾನ ಹಂಚಿಕೆ ಮಾಡಲಾಗಿದೆ. ಸದರಿ ಅನುದಾನದಲ್ಲಿ 60% ರಷ್ಟು ಅನುದಾನವು ನಿರ್ಬಂಧಿತ ಅನುದಾನವಾಗಿದ್ದು, ಇದನ್ನು ಸಮಾನವಾಗಿ ಕುಡಿಯುವ ನೀರು ಸರಬರಾಜು ಮತ್ತು ಘನತ್ಯಾಜ್ಯ ವಸ್ತು ನಿರ್ವಹಣೆಗೆ ಬಳಸಲು ಕಡ್ಡಾಯಗೊಳಿಸಲಾಗಿದೆ ಹಾಗೂ ಉಳಿದ 40% ರಷ್ಟು ಅನುದಾನವನ್ನು ಇತರ ಮೂಲಭೂತ ಸೌಕರ್ಯಗಳ ಕಾಮಗಾರಿಗಳಿಗೆ ನಗರದ ಆದ್ಯತೆ ಮತ್ತು ಅವಶ್ಯಕತೆಗನುಗುಣವಾಗಿ ಬಳಸಲು ಮಾರ್ಗಸೂಚಿ ಹೊರಡಿಸಲಾಗಿದೆ.<br><br>**4. <u>ಕೇಂದ್ರ ಪುರಸ್ಕೃತ ಅಮೃತ್ 2.0 ಯೋಜನೆ:</u>**<br>ಸದರಿ ಯೋಜನೆಯಡಿ ಸರ್ಕಾರದ ಆದೇಶ ಸಂಖ್ಯೆ:ಯುಡಿಡಿ 114 ಸಿಎಸ್ಎಸ್; ದಿನಾಂಕ:18/05/2022 ರನ್ವಯ ರಾಜ್ಯದ 1 ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆ ಇರುವ 287 ನಗರಗಳನ್ನು ಆಯ್ಕೆ ಮಾಡಲಾಗಿದೆ. ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ನೀರು ಸರಬರಾಜು, ಜಲಮೂಲಗಳ ಪುನಃಶ್ಚೇತನ ಹಾಗೂ ಹಸಿರು ಜಾಗ ಮತ್ತು ಉದ್ಯಾನವನ ಅಭಿವೃದ್ಧಿ ಕಾಮಗಾರಿಗಳನ್ನು ಯೋಜನಾ ಅವಧಿ 2021-22 ರಿಂದ 2025-26 ರವರೆಗೆ ಅನುಷ್ಠಾನಗೊಳಿಸಲಾಗುತ್ತದೆ. ಮೊದಲ ಹಂತದಲ್ಲಿ ಆಯ್ಕೆಯಾದ 185 ನಗರಗಳ ನೀರು ಸರಬರಾಜು ಕ್ರಿಯಾ ಯೋಜನೆ ಮೊತ್ತ ರೂ.6,815 ಕೋಟಿಗಳಿಗೆ ಕೇಂದ್ರ ಸರ್ಕಾರದಿಂದ ಅನುಮೋದನೆ ಪಡೆಯಲಾಗಿದೆ ಹಾಗೂ ಅನುಷ್ಠಾನ ಸಂಸ್ಥೆ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿವತಿಯಿಂದ ಅನುಮೋದನೆಯಾದ ಕಾಮಗಾರಿಗಳನ್ನು ನಿಯಮಾನುಸಾರ ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br><br>**5. <u>ಸ್ವಚ್ಛ ಭಾರತ್ ಮಿಷನ್ ಯೋಜನೆ:</u>**<br>ಕೇಂದ್ರ ಪುರಸ್ಕೃತ ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಿಗೆ ಅಗತ್ಯವಿರುವ ಮೂಲಭೂತ ಸೌಕರ್ಯಗಳಾದ ವೈಯಕ್ತಿಕ ಶೌಚಾಲಯಗಳು, ಸಮುದಾಯ/ ಸಾರ್ವಜನಿಕ ಶೌಚಾಲಯಗಳು ಹಾಗೂ ಘನತ್ಯಾಜ್ಯ ನಿರ್ವಹಣೆಗೆ ಅಗತ್ಯ ಅನುದಾನವನ್ನು ಪೌರಾಡಳಿತ ನಿರ್ದೇಶನಾಲಯದಿಂದ ಬಿಡುಗಡೆ ಮಾಡಲಾಗಿದೆ. ವೈಯಕ್ತಿಕ ಶೌಚಾಲಯಗಳ ನಿರ್ಮಾಣಕ್ಕೆ ರೂ.200.90 ಕೋಟಿ ಅನುದಾನವನ್ನು, ಸಮುದಾಯ ಸಾರ್ವಜನಿಕ ಶೌಚಾಲಯ ನಿರ್ಮಾಣಕ್ಕಾಗಿ ರೂ.35.59 ಕೋಟಿ ಅನುದಾನವನ್ನು ಹಾಗೂ ಘನತ್ಯಾಜ್ಯ ನಿರ್ವಹಣೆಗಾಗಿ ರೂ.682.37 ಕೋಟಿ ಅನುದಾನ ಬಿಡುಗಡೆ ಮಾಡಲಾಗಿದೆ. |
| ಇ | ಇತ್ತೀಚೆಗೆ ಗ್ರಾಮ ಪಂಚಾಯಿತಿಗಳನ್ನು ಮೇಲ್ದರ್ಜೆಗೇರಿಸಿದ ನಗರ ಸ್ಥಳೀಯ ಸಂಸ್ಥೆಗಳಿಗೆ ಅಗತ್ಯವಿರುವ ಸಿಬ್ಬಂದಿ, ಕಛೇರಿ ಪೀಠೋಪಕರಣ & ಇತರೆ ಅಗತ್ಯ ಮೂಲಭೂತ ಸೌಲಭ್ಯಗಳನ್ನು ನೀಡಲಾಗಿದೆಯೇ (ಸಂಸ್ಥೆವಾರು ವಿವರ ನೀಡುವುದು); | ಇತ್ತೀಚೆಗೆ ಮೇಲ್ದರ್ಜೆಗೇರಿಸಿದ ನಗರ ಸ್ಥಳೀಯ ಸಂಸ್ಥೆಗಳಿಗೆ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಯೋಜನೆ (ಹಂತ-4) ಯಲ್ಲಿ ಮಾರ್ಗಸೂಚಿಯನ್ವಯ ಅನುದಾನ ಹಂಚಿಕೆಯಾಗಿದ್ದು, ಅಗತ್ಯ ಮೂಲಭೂತ ಸೌಕರ್ಯಗಳನ್ನು |

| | | |
|---|---|---|
| | | ಕಲ್ಪಿಸಲು ಕ್ರಮ ವಹಿಸಲಾಗುತ್ತಿದೆ. ನಗರ ಸ್ಥಳೀಯ ಸಂಸ್ಥೆವಾರು ವಿವರಗಳನ್ನು **ಅನುಬಂಧ-2** ರಲ್ಲಿ ನೀಡಿದೆ. |
| ಈ | ರಾಜ್ಯದಲ್ಲಿರುವ ವಿವಿಧ ಪೌರಾಡಳಿತ ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹೊರಗುತ್ತಿಗೆ ಸಿಬ್ಬಂದಿಗೆ ವೇತನವನ್ನು ಪೌರ ಕಾರ್ಮಿಕರಂತೆ ನೇರ ಪಾವತಿಗೆ ಕ್ರಮವಹಿಸಲಾಗುವುದೇ; ನೇರ ಪಾವತಿಯಿಂದ ಗುತ್ತಿಗೆದಾರ ಸಂಸ್ಥೆಗೆ ಪಾವತಿಸುವ ಸೇವಾ ಶುಲ್ಕದ ಹಣ ಸರ್ಕಾರಕ್ಕೆ ಉಳಿತಾಯವಾಗುವುದಲ್ಲವೇ; ಈ ಕುರಿತು ಸರ್ಕಾರದ ನಿಲುವೇನು? | • ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳಲ್ಲಿ ಹೊರಗುತ್ತಿಗೆ ಮತ್ತು ಸಮಾನ ಕೆಲಸಕ್ಕೆ ಸಮಾನ ವೇತನ/ಕನಿಷ್ಟ ವೇತನ /ದಿನಗೂಲಿ/ಕ್ಷೇಮಾಭಿವೃದ್ಧಿ/ ಇತರ (ಹೊರಗುತ್ತಿಗೆ-2920 ಮತ್ತು ಇತರ-1200) ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ನೀರು ಸರಬರಾಜು ಸಹಾಯಕರು/ಹೆಲ್ಪರ್/ವಾಲ್ವಮನ್‌ಗಳನ್ನು ವಿಶೇಷ ನೇಮಕಾತಿಯಡಿ ಪರಿಗಣಿಸುವ ಕುರಿತು ಪ್ರಸ್ತಾವನೆ ಪರಿಶೀಲನೆಯಲ್ಲಿರುತ್ತದೆ.<br>• ಕರ್ನಾಟಕ ಪೌರಸಭೆಗಳ (ಅಧಿಕಾರಿ ಮತ್ತು ನೌಕರರ ನೇಮಕಾತಿ) ನಿಯಮಗಳು 2010 ರನ್ವಯ, ಘನತ್ಯಾಜ್ಯ ನಿರ್ವಹಣೆ ವಿಭಾಗದಲ್ಲಿ ತ್ಯಾಜ್ಯ ಸಾಗಿಸುವ ವಾಹನ ಚಾಲಕರ ಗ್ರೂಪ್-ಡಿ ಹುದ್ದೆ ಮಂಜೂರಾಗಿರುವುದಿಲ್ಲ. ಆದರೆ ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳಲ್ಲಿ ನಗರಗಳ ಸ್ವಚ್ಚತಾ ದೃಷ್ಟಿಯಿಂದ ವಾಹನಗಳ ಸಂಖ್ಯೆಗಳಿಗನುಗುಣವಾಗಿ ಘನತ್ಯಾಜ್ಯ ವಾಹನ ಚಾಲಕರನ್ನು (ಗ್ರೂಪ್-ಡಿ) ಹೊರಗುತ್ತಿಗೆ ಮೂಲಕ ಪಡೆದು ಕೆಲಸ ನಿರ್ವಹಿಸುತ್ತಿರುವುದರಿಂದ ಅವರನ್ನು ನೇರಪಾವತಿಗೆ ಒಳಪಡಿಸುವ ಕುರಿತು ಪ್ರಸ್ತಾವನೆ ಪರಿಶೀಲನೆಯಲ್ಲಿರುತ್ತದೆ.<br>• ಗುತ್ತಿಗೆದಾರ ಸಂಸ್ಥೆಗಳಿಂದ ಸೇವಾ ಶುಲ್ಕದಡಿ ಆಡಳಿತಾತ್ಮಕ ದೃಷ್ಟಿಯಿಂದ ಸೇವೆಯನ್ನು ಪಡೆಯಲಾಗುತ್ತಿದೆ. |

**ಸಂಖ್ಯೆ:ನಅಇ 60 ಎಲ್‌ಸಿಕ್ಯೂ 2022.**

(ಎನ್. ನಾಗರಾಜು ಎಂ ಟಿ ಬಿ)
**ಪೌರಾಡಳಿತ ಮತ್ತು ಸಣ್ಣ ಕೈಗಾರಿಕೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು**

## ಅನುಬಂಧ-1

## ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ವೃಂದ ಬಲ

| | ಹುದ್ದೆಯ ಹೆಸರು | ಮಂಜೂರಾದ ಹುದ್ದೆಗಳ ಸಂಖ್ಯೆ | ಕರ್ತವ್ಯ ನಿರ್ವಹಿಸುತ್ತಿರುವ ಖಾಯಂ ನೌಕರರ ಸಂಖ್ಯೆ | ಖಾಲಿ ಹುದ್ದೆಗಳ ಸಂಖ್ಯೆ | ದಿನಗೂಲಿ/ಗುತ್ತಿಗೆ/ಹೊರ ಗುತ್ತಿಗೆಯಡಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರ ಸಂಖ್ಯೆ |
|---|---|---|---|---|---|
| 1 | ಪೌರಾಯುಕ್ತರು ದರ್ಜೆ- 1 | 13 | 13 | 0 | 0 |
| 2 | ಪೌರಾಯುಕ್ತರು ದರ್ಜೆ- 2 | 48 | 42 | 6 | 0 |
| 3 | ಸಹಾಯಕ ಕಾರ್ಯಪಾಲಕ ಅಭಿಯಂತರರು | 61 | 45 | 16 | 0 |
| 4 | ಸಹಾಯಕ ಕಾರ್ಯಪಾಲಕ ಅಭಿಯಂತರರು (ಪರಿಸರ) | 46 | 33 | 13 | 0 |
| 5 | ಸೀನಿಯರ್ ಪ್ರೋಗ್ರಾಮರ್ | 59 | 0 | 59 | 52 |
| 6 | ಸಹಾಯಕ ಅಭಿಯಂತರರು | 60 | 24 | 36 | 1 |
| 7 | ಪರಿಸರ ಅಭಿಯಂತರರು | 143 | 67 | 76 | 2 |
| 8 | ಮುಖ್ಯಾಧಿಕಾರಿ ದರ್ಜೆ- 1 | 118 | 109 | 9 | 3 |
| 9 | ಲೆಕ್ಕಾಧಿಕಾರಿ | 21 | 10 | 11 | 0 |
| 10 | ಲೆಕ್ಕ ಅಧೀಕ್ಷಕರು | 60 | 35 | 25 | 0 |
| 11 | ಕಛೇರಿ ವ್ಯವಸ್ಥಾಪಕರು | 189 | 151 | 38 | 3 |
| 12 | ಕಂದಾಯಾಧಿಕಾರಿ | 185 | 135 | 50 | 4 |
| 13 | ಮುಖ್ಯಾಧಿಕಾರಿ ದರ್ಜೆ- 2 | 137 | 128 | 9 | 7 |
| 14 | ಅಕೌಂಟೆಂಟ್ | 183 | 46 | 137 | 196 |
| 15 | ಕಿರಿಯ ಅಭಿಯಂತರರು | 522 | 243 | 279 | 40 |
| 16 | ಹಿರಿಯ ಆರೋಗ್ಯ ನಿರೀಕ್ಷಕರು | 319 | 202 | 117 | 3 |
| 17 | ಪ್ರಥಮ ದರ್ಜೆ ಸಹಾಯಕರು | 533 | 397 | 136 | 12 |
| 18 | ಸಮುದಾಯ ಸಂಘಟನಾಧಿಕಾರಿ | 318 | 124 | 194 | 6 |
| 19 | ಶೀಘ್ರಲಿಪಿಗಾರರು | 242 | 10 | 232 | 6 |
| 20 | ಜ್ಯೂನಿಯರ್ ಪ್ರೋಗ್ರಾಮರ್ | 132 | 0 | 132 | 214 |
| 21 | ಪ್ರಥಮ ದರ್ಜೆ ಕಂದಾಯ ನಿರೀಕ್ಷಕರು | 379 | 207 | 172 | 12 |
| 22 | ನೀರು ಸರಬರಾಜು ಸಹಾಯಕ | 1014 | 42 | 972 | 228 |
| 23 | ಕಂಪ್ಯೂಟರ್ಆಪರೇಟರ್/ಡಾಟಾಎಂಟ್ರಿ ಆಪರೇಟರ್ | 593 | 0 | 593 | 568 |
| 24 | ಕಿರಿಯ ಆರೋಗ್ಯ ನಿರೀಕ್ಷಕರು | 543 | 209 | 334 | 26 |
| 25 | ಎಲೆಕ್ಟ್ರಿಷಿಯನ್ ದರ್ಜೆ 1 | 88 | 34 | 54 | 4 |
| 26 | ಸಮುದಾಯ ಸಂಘಟಕರು | 373 | 132 | 241 | 6 |
| 27 | ದ್ವಿತೀಯ ದರ್ಜೆ ಸಹಾಯಕರು | 1219 | 871 | 348 | 136 |
| 28 | ಕರವಸೂಲಿಗಾರರು | 669 | 472 | 197 | 152 |
| 29 | ವಾಹನಚಾಲಕರು | 860 | 92 | 768 | 2222 |
| 30 | ಎಲೆಕ್ಟ್ರಿಷಿಯನ್ ದರ್ಜೆ 2 | 68 | 16 | 52 | 44 |
| 31 | ಸಹಾಯಕ ನೀರು ಸರಬರಾಜು ಸಹಾಯಕರು | 1095 | 44 | 1051 | 303 |
| 32 | ಲ್ಯಾಬ್ ಟೆಕ್ನಿಷಿಯನ್ | 62 | 0 | 62 | 42 |
| 33 | ಪ್ಲಂಬರ್ | 189 | 4 | 185 | 28 |
| 34 | ಸ್ಯಾನಿಟರಿ ಸೂಪರ್‌ವೈಸರ್ | 663 | 225 | 438 | 168 |
| 35 | ಹೆಡ್ ಗಾರ್ಡನರ್ | 82 | 10 | 72 | 67 |
| 36 | ಸೀನಿಯರ್ ವಾಲ್‌ಮನ್ | 607 | 187 | 420 | 65 |
| 37 | ಪೌರಕಾರ್ಮಿಕರು | 15422 | 5594 | 9828 | 6362 |
| 38 | ಅಟೆಂಡರ್ | 978 | 666 | 312 | 105 |
| 39 | ಲೋಡರ್ | 2487 | 342 | 2145 | 1031 |
| 40 | ಕ್ಲೀನರ್ | 521 | 66 | 455 | 504 |
| 41 | ಗಾರ್ಡನರ್ | 407 | 98 | 309 | 161 |
| 42 | ಹೆಲ್ಪರ್/ವಾಟರ್ ಸಪ್ಲೈ ವಾಲ್‌ಮನ್ | 3400 | 1054 | 2346 | 3099 |
| | ಒಟ್ಟು | **35108** | **12179** | **22929** | **15914** |

Scanned with CamScanner

ಅನುಬಂಧ ೧

**ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಯೋಜನೆ (ಹಂತ-4) ಯಡಿ ಮೇಲ್ದರ್ಜೆಗೇರಿಸಿದ ನಗರ ಸ್ಥಳೀಯ ಸಂಸ್ಥೆಗಳಿಗೆ ಹಂಚಿಕೆ ಮಾಡಿರುವ ಅನುದಾನದ ವಿವರ**

(ರೂ. ಲಕ್ಷಗಳು)

| ಕ್ರ. ಸಂ. | ಜಿಲ್ಲೆಯ ಹೆಸರು | ನಗರ ಸ್ಥಳೀಯ ಸಂಸ್ಥೆಯ ಹೆಸರು | ವರ್ಗ | ಹಂಚಿಕೆ |
|---|---|---|---|---|
| 1 | ಕೋಲಾರ | ವೇಮಗಲ್-ಕುರುಗಲ್ | ಪಟ್ಟಣ ಪಂಚಾಯತ್ | 500.00 |
| 2 | ಬೆಂಗಳೂರು ನಗರ | ಮಾದನಾಯಕನಹಳ್ಳಿ | ನಗರಸಭೆ | 3000.00 |
| 3 | | ಕೋನಪ್ಪನ ಅಗ್ರಹಾರ | ಪುರಸಭೆ | 1000.00 |
| 4 | | ಚಿಕ್ಕಬಾಣಾವಾರ | ಪುರಸಭೆ | 1000.00 |
| 5 | | ಹುಣಸಮಾರನಹಳ್ಳಿ | ಪುರಸಭೆ | 1000.00 |
| 6 | | ದೊಡ್ಡತೋಗೂರು | ಪಟ್ಟಣ ಪಂಚಾಯತ್ | 500.00 |
| 7 | ಬೆಂಗಳೂರು (ಗ್ರಾಮಾಂತರ) | ಬಾಶೆಟ್ಟಿಹಳ್ಳಿ | ಪಟ್ಟಣ ಪಂಚಾಯತ್ | 500.00 |
| 8 | ರಾಮನಗರ | ಹಾರೋಹಳ್ಳಿ | ಪಟ್ಟಣ ಪಂಚಾಯತ್ | 500.00 |
| 9 | ತುಮಕೂರು | ಹುಳಿಯಾರ್ | ಪಟ್ಟಣ ಪಂಚಾಯತ್ | 500.00 |
| 10 | ದಾವಣಗೆರೆ | ನ್ಯಾಮತಿ | ಪಟ್ಟಣ ಪಂಚಾಯತ್ | 500.00 |
| 11 | ಶಿವಮೊಗ್ಗ | ಆನವಟ್ಟಿ | ಪಟ್ಟಣ ಪಂಚಾಯತ್ | 500.00 |
| 12 | | ಹೊಳೆಹೊನ್ನೂರು | ಪಟ್ಟಣ ಪಂಚಾಯತ್ | 500.00 |
| 13 | ಮೈಸೂರು | ಹೂಟಗಳ್ಳಿ | ನಗರಸಭೆ | 3000.00 |
| 14 | | ರಮ್ಮನಹಳ್ಳಿ | ಪಟ್ಟಣ ಪಂಚಾಯತ್ | 500.00 |
| 15 | | ಕಡಕೊಳ | ಪಟ್ಟಣ ಪಂಚಾಯತ್ | 500.00 |
| 16 | | ಶ್ರೀರಾಂಪುರ | ಪಟ್ಟಣ ಪಂಚಾಯತ್ | 500.00 |
| 17 | | ಬೋಗಾದಿ | ಪಟ್ಟಣ ಪಂಚಾಯತ್ | 500.00 |
| 18 | ಚಿಕ್ಕಮಗಳೂರು | ಅಜ್ಜಂಪುರ | ಪಟ್ಟಣ ಪಂಚಾಯತ್ | 500.00 |
| 19 | ದಕ್ಷಿಣ ಕನ್ನಡ | ಕಡಬ | ಪಟ್ಟಣ ಪಂಚಾಯತ್ | 500.00 |
| 20 | | ಬಜಪೆ | ಪಟ್ಟಣ ಪಂಚಾಯತ್ | 500.00 |
| 21 | | ಕಿನ್ನಿಗೋಳಿ | ಪಟ್ಟಣ ಪಂಚಾಯತ್ | 500.00 |
| 22 | | ಸೋಮೇಶ್ವರ | ಪುರಸಭೆ | 1000.00 |
| 23 | ಉಡುಪಿ | ಬೈಂದೂರು | ಪಟ್ಟಣ ಪಂಚಾಯತ್ | 500.00 |
| 24 | ಹಾವೇರಿ | ರಟ್ಟೆಹಳ್ಳಿ | ಪಟ್ಟಣ ಪಂಚಾಯತ್ | 500.00 |
| 25 | ಉತ್ತರ ಕನ್ನಡ | ಮಂಕಿ | ಪಟ್ಟಣ ಪಂಚಾಯತ್ | 500.00 |
| 26 | ಬೆಳಗಾವಿ | ಅಂಕಲಗಿ-ಅಕ್ಕತಂಗೇರಹಾಳ | ಪಟ್ಟಣ ಪಂಚಾಯಿತಿ | 500.00 |
| 27 | | ಕಾಗವಾಡ | ಪಟ್ಟಣ ಪಂಚಾಯಿತಿ | 500.00 |
| 28 | | ಮಚ್ಚೆ | ಪಟ್ಟಣ ಪಂಚಾಯಿತಿ | 500.00 |
| 29 | | ಪೀರನವಾಡಿ | ಪಟ್ಟಣ ಪಂಚಾಯಿತಿ | 500.00 |
| 30 | | ಯರಗಟ್ಟಿ | ಪಟ್ಟಣ ಪಂಚಾಯಿತಿ | 500.00 |
| 31 | ವಿಜಯಪುರ | ಬಬಲೇಶ್ವರ | ಪಟ್ಟಣ ಪಂಚಾಯಿತಿ | 500.00 |
| 32 | | ತಿಕೋಟಾ | ಪಟ್ಟಣ ಪಂಚಾಯಿತಿ | 500.00 |
| 33 | ಬಾಗಲಕೋಟೆ | ಲೋಕಾಪುರ | ಪಟ್ಟಣ ಪಂಚಾಯತ್ | 500.00 |
| 34 | | ಶಿರೂರು | ಪಟ್ಟಣ ಪಂಚಾಯತ್ | 500.00 |
| 35 | ಕಲಬುರಗಿ | ಯಡ್ರಾಮಿ | ಪಟ್ಟಣ ಪಂಚಾಯತ್ | 500.00 |
| 36 | | ಕಾಳಗಿ | ಪಟ್ಟಣ ಪಂಚಾಯತ್ | 500.00 |
| 37 | | ಕಮಲಾಪುರ | ಪಟ್ಟಣ ಪಂಚಾಯತ್ | 500.00 |
| 38 | ಯಾದಗಿರಿ | ಹುಣಸಗಿ | ಪಟ್ಟಣ ಪಂಚಾಯತ್ | 500.00 |
| 39 | ರಾಯಚೂರು | ಜಾಲಹಳ್ಳಿ | ಪುರಸಭೆ | 1000.00 |



ಮುಖ್ಯ ಅಭಿಯಂತರರು
ಪೌರಾಡಳಿತ ನಿರ್ದೇಶನಾಲಯ
ಬೆಂಗಳೂರು

Scanned with CamScanner